# ಬರ ಇದ್ದರೂ ಭಕ್ತರ ಭಕ್ತಿಗೆ ಬರವಿಲ್ಲ

ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಶ್ರೀಕ್ಷೇತ್ರ, ಪವಾಡಪುರುಷ ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿ ಈ ಊರಿನ ಅಧಿದೇವತೆ, ಸ್ವಾಮಿ ಇಲ್ಲಿ ನೆಲೆಸಿ ಈ ಊರನ್ನು ಕೈಲಾಸವನ್ನಾಗಿ ಮಾಡಿದಾತ, ಬೇಡಿ ಬಂದ ಭಕ್ತರ ಬೇಡಿಕೆಗಳನ್ನು ಕೊಟ್ಟಂತಹ ಊರು ಕೊಟ್ಟೂರು. ಪವಿತ್ರ ಮಣ್ಣಿನಲ್ಲಿ ದಾನ, ಧರ್ಮಕ್ಕೆ ಎತ್ತಿದ ಕೈ ಧರ್ಮದಿಂದಲೇ ಮುಕ್ತಿ ಧರ್ಮದಿಂದಲೇ ಶಕ್ತಿ, ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎನ್ನುವ ಗುರುವಾಣಿಯಂತೆ ಕೊಟ್ಟೂರೇಶ್ವರ ಸ್ವಾಮಿ ಎಲ್ಲರನ್ನೂ ಯಾವುದೇ ಬೇದ ಭಾವವಿಲ್ಲದೆ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎನ್ನುವ ಸಮತಾಭಾವದಿಂದ ಸಲಹಿದಾತ.

12ನೇ ಶತಮಾನದಲ್ಲಿ ಕೋಗಳಿಯ ನಾಡು 300 ರ ಆಡಳಿತ ಕೇಂದ್ರ ವಾಗಿತ್ತು. ಅನಂತರ ಕ್ರಿ.ಶ.16 ಮತ್ತು 17ನೇ ಶತಮಾನಗಳ ಅವಧಿಯಲ್ಲಿ ವೀರಶೈವ 'ಧರ್ಮವನ್ನು ಉದ್ದರಿ ಉದ್ಧರಿಸಲು ಪ್ರಚಾರ ಮಾಡಲು ಶಿವನ ಅಪ್ಪಣೆ ಮೇರೆಗೆ ಪಂಚಗಣಾಧೀಶರರು ಈ ಭೂಮಿಗೆ ಬಂದರು. ಅವರೆಲ್ಲ ಜಂಗಸ್ವರೂಪಿ ಗುರು. ಕೊಟ್ಟೂರು ಸ್ವಾಮಿ ಸರ್ವಧರ್ಮ ಪ್ರೇಮಿ, ಹಿಂದೂ, ಮುಸ್ಲಿಂ ಜೈನ ಧರ್ಮದ ಮೂಲ ಎನ್ನುವ ವಚನದಿಂದ ಸಕಲರ ಲೇಸನ್ನೇ ದಾತ, ಜಾತ್ಯತೀತ ದೇವರು. ಪ್ರತಿವರ್ಷ ರಥೋತ್ಸವದಂದು ಹರಿಜನ ಮುತ್ತೈದೆ ಯರು ಕಳಸ ಬೆಳಗಿದ ಬಳಿಕ ಸ್ವಾಮಿಯ ರಥೋತ್ಸವ ಸಾಗುತ್ತದೆ. ಈ ಸ್ವಾಮಿಗೆ ಎಲ್ಲ ಜಾತಿ ಧರ್ಮದ ಭಕ್ತರು ಇದ್ದಾರೆ.

ಕೊಟ್ಟೂರೇಶ್ವರ ಸ್ವಾಮಿ ಕೊಟ್ಟೂರಿಗೆ ಬಂದು ನೆಲೆಸಿ ಹರಪನಹಳ್ಳಿ ಪಾಳೆಗಾರ ಸೋಮಶೇಖರ ನಾಯಕನಿಗೆ ಆಶೀರ್ವಾದ ಮಾಡಿ ಅನಂತರ ದೆಹಲಿಯ ಅಕ್ಬರ್ ಬಾದಷಾಹನಿಂದ 'ಭಕ್ತಿಯ ಕಾಣಿಕೆಯಾದ ಮಣಿಮಂಚವನ್ನು ಪಡೆದಾತ ಎಂಬ ಪ್ರತೀತಿ ಇದೆ. ಪಂಚಗಣಾಧೀಶ್ವರರು: ಶಿವನ ಅಪ್ಪಣೆ ಮೇರೆಗೆ ಕೈಲಾಸದಿಂದ ಧರೆಗೆ ಬಂದು, ಧರ್ಮವನ್ನು ಕಾಪಾಡಲು ಭಕ್ತರಿಗೆ ಸರಳ ಜೀವನ, ಉದಾತ್ತ ಚಿಂತನೆಗಳನ್ನು ಮೈಗೂಡಿಸಿಕೊಳ್ಳಲು ಜನರಲ್ಲಿ ಧರ್ಮ ಜಾಗೃತಿಯನ್ನು ಉಂಟು ಮಾಡಲು ಕೊಟ್ಟೂರೇಶ್ವರ ಕೋಲಶಾಂತೇಶವರ, ಮದ್ದಾನೇಶ್ವರ, ತಿಪ್ಪೇರುದ್ರಸ್ವಾಮಿ, ಕೆಂಪೇಶ್ವರ ಪಂಚಗಣಾಧಿಶ್ವರರು ಭೂಮಿಯ ಮೇಲೆ ಶಿವನ ಸಾಕ್ಷಾತ್ಕಾರವನ್ನು ಭಕ್ತರಿಗೆ ತಿಳಿಸಿಕೊಟ್ಟವರು. ಕೊಟ್ಟೂರು ಸುತ್ತಲಿನ ಪರಿಸರ ಜನಪದ ಸಾಹಿತ್ಯದ ತವರೂರು ವಿಭಿನ್ನ ಜನಾಂಗ, ಸಂಸ್ಕೃತಿ ಪರಂಪರೆಯುಳ್ಳ ಶ್ರೀಗುರುಕೊಟ್ಟೂರೇಶ್ವರ ಸ್ವಾಮಿ ಪವಾಡ ಪುರುಷರು, ಸತ್ತ ಎಮ್ಮೆಯನ್ನು ಬದುಕಿಸಿದಾತ, ಕುರುಡನಿಗೆ ಕಣ್ಣೆ ನೀಡಿದಾತ, ಕುಷ್ಠರೋಗಿಯನ್ನು ಗುಣಪಡಿಸಿದಾತ. ಸಂತಾನಹೀನರಿಗೆ ಮಕ್ಕಳನ್ನು ಕರುಣಿಸಿದಾತ, ಅದು ಇಂದಿಗೂ ಸತ್ಯ, ತೊಟ್ಟಿಲ್ಲ ಮಠದಲ್ಲಿ ಇಂದಿಗೂ ತೊಟ್ಟಿಲು ಇದೆ. ಹರಕೆ ಹೊತ್ತ ಭಕ್ತರು ತಮ್ಮ ಬೇಡಿಕೆ ಈಡೇರಿಸಿಕೊಂಡು ಹೋಗುತ್ತಾರೆ. ಮಕ್ಕಳಿಲ್ಲದ ನಂಬಿಯಕ್ಕನಿಗೆ ಮಗನಾಗಿ ತಾಯಿಯ ವಾತ್ಸಲ್ಯ ನೀಗಿಸಿದ ಸ್ವಾಮಿಯ ಪವಾಡ ನೂರಾರು. ಮಣ್ಣಿನಲ್ಲಿ ಸಾಮರಸ್ಯವಿದೆ. ಜೈವಿಕ ಜನಾಂಗಿಕ ನೆಲೆಗಳಲ್ಲಿ ಕಲೆ, ಕಥೆಗಳು ಸೃಷ್ಟಿಯಾಗಿದೆ. ಬೀಸುವಾಗ ಕುಟ್ಟುವಾಗ ಮದುವೆ-ಮುಂಜಿ, ಹಬ್ಬ-ಹರಿದಿನಗಳಲ್ಲಿ ಗಳಲ್ಲಿ ಸೋಬಾನೆ ಪದಗಳಲ್ಲಿ ಶ್ರೀಕೊಟ್ಟೂರೇಶ್ವರ ಸ್ವಾಮಿಯನ್ನು ನೆನೆದು ಮುಂದುವರಿಯುತ್ತಾರೆ. ಕೊಟ್ಟೂರಿನ ಪುಣ್ಯ ಭೂಮಿಯಲ್ಲಿ ಯಾವುದೇ ಧರ್ಮ, ಜಾತಿ, ವರ್ಣ ಲಿಂಗಬೇದವಿಲ್ಲದೆ ಎಲ್ಲರೂ ಶಿವನ ಸಾಕ್ಷಾತ್ಕಾರ ಪಡೆಯಲು ಸ್ವಾಮಿ ಭಕ್ತಿಯ ಮಾರ್ಗದಿಂದ ಮುಕ್ತಿ ಕರುಣಿಸಿದಾತ. ವೀರಶೈವ ಧರ್ಮವನ್ನು ನಾಡಿನಾದ್ಯಂತ ಪ್ರಚಾರ ಮಾಡಿ ಭಕ್ತರಲ್ಲಿ ಜನಜಾಗೃತಿ ಮೂಡಿಸಿದಾತ. ಜಂಗಮ ಮತ್ತು ಭಕ್ತ ಒಂದೇ ಎನ್ನುವ ವಿಶಾಲ ಮನೋಭೂಮಿಕೆಯಲ್ಲಿ ವೀರಶೈವ ಧರ್ಮದ ತತ್ವಗಳಾದ ಅಷ್ಟಾವರ್ಣ, ಷಟ್ ಸ್ಥಲಗಳನ್ನು ಬದುಕಿನಲ್ಲಿ ಅಂತರಂಗ ಹಾಗೂ ಬಹಿರಂಗವಾಗಿ ಸುಜ್ಞಾನದ ಮಾರ್ಗ.













